1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**1101/2025**

ಹೆಸರುಃ ಬಸವರಾಜಪ್ಪ ಚಾಸಾಃ 7

ತಂದೆಃ  ಮುದ್ದಪ್ಪ ಪ್ರಾಸಾ: 2

ವಯಸ್ಸುಃ  40 ವರ್ಷ

ಉದ್ಯೋಗಃ ಕೂಲಿ ಕೆಲಸ

ವಾಸ ಸ್ಥಳಃ ಮೆದುಗೊಂಡನಹಳ್ಳಿ ಗ್ರಾಮ, ,  ಚನ್ನಗಿರಿ ತಾ.

ಸಾಕ್ಷಿಗೆ ದಿನಾಂಕಃ 31-12-2025ರಂದು ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನೋಡುತ್ತಿರುವ  ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ  ಸ್ಥಳ ಮಹಜರಾಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-2ನ್ನು ಅಪಘಾತದ ವಿಚಾರವಾಗಿ ದೇವರಹಳ್ಳಿ ಹೆದ್ದಾರಿಯ ಬಳಿ ಮಾಡಿದ್ದು,  ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಸದರಿ ಸಮಯಕ್ಕೆ ನನ್ನೊಂದಿಗೆ ಚಾಸಾ-6 ಮತ್ತು  ಪೊಲೀಸರು ಹಾಜರಿದ್ದು, ಸದರಿ ಮಹಜರನ್ನು 12.30 ಯಿಂದ 2.00 ಗಂಟೆಯವರೆಗೆ ಬರೆದಿರುತ್ತಾರೆ. ಸದರಿ ನಿಪಿ-2 ಕ್ಕೆ ನನ್ನೊಂದಿಗೆ ಚಾಸಾ-6 ರವರು ಸಹಿ ಮಾಡಿರುತ್ತಾರೆ. ಸದರಿ ಸಮಯಕ್ಕೆ ಒಂದು ಫೋಟೋವನ್ನು ತೆಗೆದಿದ್ದು ಸಾಕ್ಷಿ ಕಡತದಲ್ಲಿನ ಸದರಿ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಕೃತ್ಯ ನಡೆದ ಸ್ದಳದ ಕಚ್ಚಾ ನಕಾಶೆಯಾಗಿದ್ದು  ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು

ಗುರುತಿಸಲಾಯಿತು.ಸದರಿ ನಿಪಿ-4 ನ್ನು ಅಪಘಾತದವಾ ಸ್ಥಳದಲ್ಲಿ ತಯಾರಿಸಿರುತ್ತಾರೆ. ಸದರಿ ಸಮಯಕ್ಕೆ ನನ್ನೊಂದಿಗೆ ಪೊಲೀಸರು, ಚಾಸಾ-6ರವರು ಇದ್ದು ಅದಕ್ಕೆ ಚಾಸಾ-6ರವರು ಸಹಿ ಮಾಡಿರುತ್ತಾರೆ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ವಾಹನಗಳ ತಡೆ ಪಂಚನಾಮೆಯಾಗಿದ್ದು ಅದನ್ನು  ನಿಪಿ-17  ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-17(ಎ)  ಎಂದು ಗುರುತಿಸಲಾಯಿತು. ಸದರಿ ನಿಪಿ-12 ಕ್ಕೆ ನಾನು ದಿಃ 29-02-2024 ರಂದು ಪೊಲೀಸ್ ವಸತಿ ಗೃಹದ ಆವರಣದಲ್ಲಿ ವಾಹನಗಳ ಮಹಜರನ್ನು ಜರುಗಿಸುವಾಗ ಮಾಡಿರುತ್ತೇನೆ. ಸದರಿ ವಾಹನಗಳ ಸಂಖ್ಯೆ ನನಗೆ ಹೇಳಲಾಗುವುದಿಲ್ಲ.  ಸದರಿ ಸಮಯಕ್ಕೆ ನನ್ನೊಂದಿಗೆ ಪೊಲೀಸರು, ಚಾಸಾ-6ರವರು ಹಾಜರಿದ್ದು ಅದಕ್ಕೆ ಚಾಸಾ-6ರವರು ಸಹಿ ಮಾಡಿರುತ್ತಾರೆ. ಸದರಿ ನಿಪಿ-12 ನ್ನು 2.30 ಯಿಂದ 3.00 ರವರೆಗೆ ಜರುಗಿಸಿರುತ್ತಾರೆ.

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಲಾರಿ ವಾಹನ ತಡೆ ಪಂಚನಾಮೆಯಾಗಿದ್ದು ಅದನ್ನು   ನಿಪಿ-18   ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-18(ಎ)  ಎಂದು ಗುರುತಿಸಲಾಯಿತು. ನಿಪಿ-18ರಲ್ಲಿಬ ರೆದ ವಿಚಾರ ನನಗೆ ಗೊತ್ತಿಲ್ಲ, ಅದನ್ನು ಯಾರು ಯಾವಾಗ ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ.

ಸದರಿ ಸಮಯಕ್ಕೆ ಒಂದು ಪೊಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿ ಕಡತದಲ್ಲಿನ ಪೊಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-6 ಮತ್ತು 7 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಸಾಕ್ಷಿಯು ನಿಪಿ-2,17 ಮತ್ತು 18 ರ  ಪಂಚನಾಮೆಗಳಿಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು  ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ನಿಪಿ-2,17 ಮತ್ತು 18 ರ  ಪಂಚನಾಮೆಗಳನ್ನು  ನೋಡಲಾಗಿ ಸಾಕ್ಷಿಯು ನಿಪಿ-2,17 ಮತ್ತು 18 ರ ಪಂಚನಾಮೆಗಳಿಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು  ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 02-03-2024ರಂದು ಚಾಸಾ-1ರವರು ತೋರಿಸಿದ ಸ್ಥಳದಲ್ಲಿ ಪೊಲೀಸರು 12.30 ಯಿಂದ 1.30ವರೆಗೆ ನಿಪಿ-2 ರಂತೆ ಸ್ಥಳ ಮಹಜರು ಜರುಗಿಸಿದ್ದು ಅದಕ್ಕೆ ಚಾಸಾ-1 ರವರು ಸಹ ನಮ್ಮೊಂದಿಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ-2ರ ಸಮಯಕ್ಕೆ ನಿಪಿ-4 ಕ್ಕೂ ಸಹ ಚಾಸಾ-1ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ.

ದಿಃ02-03-2024ರಂದು ಪೊಲೀಸ್ ವಸತಿ ಗೃಹದ ಬಳಿ ನಮ್ಮ ಹಾಗೂ ಚಾಸಾ-6 ರವರ ಸಮಕ್ಷಮ ಕೆಎ-16/ಇಇ-6996 ನೇ ಬೈಕ್ ನ್ನು ಹಾಗೂ ಸುಟ್ಟು ಕರಕಲಾದ ಇನ್ನೊಂದು ಬೈಕ್ ನ್ನು ನಮ್ಮ ಸಮಕ್ಷಮ ತಡೆಹಿಡಿದು 2.30 ಯ್ಡಿದ 3.30ರವರೆಗೆ ಪಂಚನಾಮೆ ಜರುಗಿಸಿ ಅದಕ್ಕೆ ನನ್ನ ಹಾಗೂ ಚಾಸಾ-6ರವರ ಸಹಿ ಪಡೆದಿರುತ್ತಾರೆ ಎಂದರೆ ಸರಿ.

ದಿಃ 22-03-2024 ರಂದು ಚನ್ನಗಿರಿಯ ತಾಲ್ಲೂಕು ಪಂಚಾಯತಿ ಮುಂಭಾಗ ನನ್ನ ಹಾಗೂ ಚಾಸಾ-6ರವರ ಸಮಕ್ಷಮ ಮದ್ಯಾಹ್ನ 1.00 ರಿಂದ 1.30ರವರೆಗೂ ಕೆಎ-19/ಎಡಿ-6004 ಬಿಳಿ ಬಣ್ಣದ ಗೂಡ್ಸ್ ಲಾರಿಯ ವಾಹನ ತಡೆ ಪಂಚನಾಮೆ ಜರುಗಿಸಿ ಅದಕ್ಕೆ ನಮ್ಮ ಸಹಿ ಪಡೆದು ನಿಪಿ-7 ರಂತೆ ಪೊಟೋ ತೆಗೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ವಿ ಆರ್ ಅರ್ ವಕೀಲರಿಂದ –**

ನಿಪಿ-2,17 ಮತ್ತು 18 ನ್ನು ಜರುಗಿಸುವ ಪೂರ್ವ ಪೊಲೀಸರು ನನಗೆ ಯಾವುದೇ ನೋಟಿಸನ್ನು ಕೊಟ್ಟಿಲ್ಲ. ನಿಪಿ-2,17 ಮತ್ತು 18 ಕ್ಕೆ ನಾನು ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2,17 ಮತ್ತು 18 ನ್ನು ಪೊಲೀಸರು ಬರೆದಿರುತ್ತಾರೆ. ನಾನು ಸದರಿ ದಾಖಲೆಗೆ ಅಪಘಾತವಾದ ದಿನಾಂಕದಂದೇ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳಿಗೆ ನಾನು ಮಹಜರು ಜರುಗಿಸಿದ ಸ್ಥಳಗಳಲ್ಲಿ ಸಹಿ ಮಾಡಿರುತ್ತೇನೆ. ಸದರಿ ಅಪಘಾತದಲ್ಲಿ ಭಾಗಿಯಾದ ಲಾರಿ ಮತ್ತು ಬೈಕ್ ಗಳ ಸಂಖ್ಯೆಯನ್ನು ನನಗೆ ಹೇಳಲಾಗುವುದಿಲ್ಲ. ನಿಪಿ-2ರ ಚೆಕ್ಕುಬಂದಿ ಪೂರ್ವ- ಪಶ್ಚಿಮಕ್ಕೆ ಹೊಲಗಳು, ಉತ್ತರ-ದಕ್ಷಿಣಕ್ಕೆ ಮುಖ್ಯ ರಸ್ತೆ, ಸದರಿ ಹೊಲಗಳು ಯಾರವು ಎಂದು ನನಗೆ ಹೇಳಲಾಗುವುದಿಲ್ಲ. ನಿಪಿ-3,6 ಮತು 7ರ ಭಾವಚಿತ್ರಗಳಿಗೆ ನಾನು ಪೊಲೀಸರ ಕೋರಿಕೆ ಮೇರೆಗೆ ನಿಂತಿರುತ್ತೇನೆ ಎಂದರೆ ಸಾಕ್ಷಿ ಅಪಘಾತವಾದ ವಿಚಾರವಾಗಿ ತನಿಖೆಗೆ ಬಂದಾಗ ನಿಂತಿರುತ್ತೇನೆ ಆಗ ಭಾವಚಿತ್ರ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-4 ಕ್ಕೆ ನಾನು ಖಾಲಿ ಹಾಳೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4ನ್ನು ಸ್ಥಳದಲ್ಲಿಯೇ ತಯಾರಿಸಿರುತ್ತಾರೆ. ನಿಪಿ-17 ಕ್ಕೆ ಮಾರನೆ ದಿನವೂ ಸಹ ನಮ್ಮನ್ನೇ ಸಾಕ್ಷಿದಾರರಾಗಿ ಕರೆದಿರುತ್ತಾರೆ. ನಿಪಿ-17 ಕ್ಕೆ ಸಹಿಯನ್ನುನಾನು ಚನ್ನಗಿರಿಯ ಪೊಲೀಸ್ ವಸತಿ ಗೃಹದ ಬಳಿ ಮಾಡಿರುತ್ತೇನೆ. ನಿಪಿ-18 ಕ್ಕೆ ಸಹಿಯನ್ನು ನಾನು ತಾಲ್ಲೂಕು ಪಂಚಾಯತಿ ಕಚೇರಿ ಮುಂಭಾಗ ಮಾಡಿರುತ್ತೇನೆ.

ಮೃತ ರಾಮಪ್ಪನವರು ಮತ್ತು ನಾನು ಒಂದೇ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ಸದರಿ ರಾಮಪ್ಪ ಚಲಾಯಿಸುತ್ತಿದ್ದ ಬೈಕ್ ಗೆ ವಿಮೆ , ಆರ್ ಸಿ ಮತ್ತು ವಾಹನ ಸಂಖ್ಯೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರುಗಳನ್ನು ಜರುಗಿಸದೇ ಇದ್ದರು ಸಹ ಮೃತ ರಾಮಪ್ಪನ ಕುಟುಂಬಸ್ಥರಿಗೆ ಅಪಘಾತದ ವಿಮಾ ಪರಿಹಾರವನ್ನು ಕೊಡಿಸುವ ಉದ್ದೇಶದಿಂದ ನಾನು ಪೊಲೀಸರೊಂದಿಗೆ ಮತ್ತು ರಾಮಪ್ಪನ ಕುಟುಂಬಸ್ಥರೊಂದಿಗೆ ಶಾಮೀಲಾಗಿ ಲಾರಿ ಚಾಲಕನ ವಿರುದ್ಧ ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಯಾವುದೇ ಮಹಜರನ್ನು ಜರುಗಿಸದೇ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**1101/2025**

ಹೆಸರುಃ ರಂಗಸ್ವಾಮಿ ಚಾಸಾಃ 1

ತಂದೆಃ ಲೇಟ್ ರಾಮಪ್ಪ ಪ್ರಾಸಾ: 1

ವಯಸ್ಸುಃ 25 ವರ್ಷ

ಉದ್ಯೋಗಃ ಹಮಾಲಿ ಕೆಲಸ

ವಾಸ ಸ್ಥಳಃ ಕೆ ರಾಮಗೊಂಡನಹಳ್ಳಿ ಗ್ರಾಮ, , ಚನ್ನಗಿರಿ ತಾ.

ಸಾಕ್ಷಿಗೆ ದಿನಾಂಕಃ 04-12-2025ರಂದು ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-16 ನನ್ನ ದೊಡ್ಡಪ್ಪ , ಚಾಸಾ-17 ಮತ್ತು 18 ನನ್ನ ಅಣ್ಣಂದಿರು. ಮೃತ ರಾಮಪ್ಪ ನನ್ನ ತಂದೆ.

2024ರ ಫೆಬ್ರವರಿ ತಿಂಗಳಿನಲ್ಲಿ ನನ್ನ ತಂದೆ ಬೈಕ್‌ನಲ್ಲಿ ಚನ್ನಗಿರಿ ಠಾಣೆಯಲ್ಲಿ ಕೆಲಸ ಮುಗಿಸಿಕೊಂಡು ನಮ್ಮ ಊರಿಗೆ ಹಿಂದಿರುಗುತ್ತಿರುವಾಗ ಆಗ ಗುಳ್ಳಹಳ್ಳಿ ಬಳಿ ಎಡಗಡೆಯಿಂದ ಬಂದ ಇನ್ನೊಂದು ಬೈಕ್ ನಮ್ಮತಂದೆ ಚಲಾಯಿಸುತ್ತಿದ್ದ ಬೈಕಿ ಗೆ ಅಪಘಾಪಡಿಸಿರುತ್ತದೆ. ಸದರಿ ಬೈಕ್ ನಂ ನನಗೆ ನೆನಪಿಲ್ಲ. ನನ್ನ ತಂದೆ ಬೈಕಿನಿಂದ ಬಿದ್ದ ತಕ್ಷಣ ಒಂದು ಲಾರಿ ಬಂದು ನನ್ನ ತಂದೆಯ ಮೇಲೆ ಹಾದು ಹೋಗಿರುತ್ತದೆ. ಸದರಿ ಅಪಘಾತದಿಂದ ನನ್ನ ತಂದೆಯ ದೇಹ ಪೂರ್ಣವಾಗಿ ಛಿದ್ರವಾಗಿ ಸ್ದಳದಲ್ಲಿಯೇ ಮೃತಪಟ್ಟಿರುತ್ತಾರೆ. ಸದರಿ ವಿಚಾರವನ್ನು ನನಗೆ ಚಾಸಾ-17ರವರು ಫೋನ್ ಮಾಡಿ ತಿಳಿಸಿರುತ್ತಾರೆ. ನಂತರ ಸದರಿ ವಿಚಾವಾಗಿ ನಾನು ಠಾಣೆಗೆ ಹಾಜರಾಗಿ ದೂರನ್ನು ದಾಖಲಿಸಿರುತ್ತೇನೆ.

ಸಾಕ್ಷಿ ಕಡತದಲ್ಲಿನ ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ದೂರಿನಲ್ಲಿ ನಾನು ಸದರಿ ಲಾರಿ ಚಾಲಕನ ವಿರುದ್ದ ಕ್ರಮ ಕೈಗೊಳ್ಳುವಂತೆ ನಮೂದಿಸಿರುತ್ತೇನೆ.

ನಾನು ನೀಡಿದ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಪರಿಶೀಲನೆಗಾಗಿ 2-3ದಿನಳ ನಂತರ ಬಂದು ಸ್ಥಳ ಮಹಜರನ್ನು ಜರುಗಿಸಲು ಬಂದಿರುತ್ತಾರೆ. ಸದರಿಯವರು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-6 ಮತ್ತು 7 ರವರ ಸಮಕ್ಷಮ ಮಹಜರನ್ನು ಜರುಗಿಸಿರುತ್ತಾರೆ.

ಸಾಕ್ಷಿ ಕಡತದಲ್ಲಿನ ಸದರಿ ಸ್ಥಳ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ-2 ಕ್ಕೆ ನನ್ನ ಜೊತೆ ಚಾಸಾ-6 ಮತ್ತು 7 ರವರು ಸಹಿ ಮಾಡಿರುತ್ತಾರೆ.

ಮಹಜರ್ ಸಮಯದಲ್ಲಿ ಪೊಲೀಸರು ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ. ಸದರಿ ಭಾವಚಿತ್ರವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಯಾವುದು ಎಂದು ನನಗೆ ಗೊತ್ತಿಲ್ಲ. ಸರಿದ ದಾಖಲೆ ಕಚ್ಚಾ ನಕಾಶೆಯಾಗಿದ್ದು ಅದನ್ನು ನಿಪಿ-4 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ನನ್ನ ತಂದೆಗೆ ಅಪಘಾತಪಡಿಸಿದ ಲಾರಿ ನಂಬರನ್ನು ನನಗೆ ಹೇಳಲಾಗುವುದಿಲ್ಲ, ನಾನು ಯಾವುದೇ ಮುಂದುವರೆದ ಹೇಳಿಕೆಯನ್ನು ಕೊಟ್ಟಿಲ್ಲ. ಸದರಿ ಲಾರಿ ಚಾಲಕನನ್ನು ನಾನು ನೋಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ದೂರು ಪಂಚನಾಮೆ ಮತ್ತು ಮುಂದುವರೆದ ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು ಪಂಚನಾಮೆ ಮತ್ತು ಮುಂದುವರೆದ ಹೇಳಿಕೆಗಳನ್ನು ನೋಡಲಾಗಿ ಸಾಕ್ಷಿಯು ದೂರು ಪಂಚನಾಮೆ ಮತ್ತು ಮುಂದುವರೆದ ಹೇಳಿಕೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 29-02-2024ರ ರಾತ್ರಿ 7.30 ರ ಸಮಯದಲ್ಲಿ ದೇವರಹಳ್ಳಿ-ಗುಳ್ಳಹಳ್ಳಿ ಗ್ರಾಮದ ನಡುವಿನ ರಸ್ತೆಯಲ್ಲಿ ದೇವರಹಳ್ಳಿಕಡೆಯಿಂದ ಎದುರುಗಡೆ ಬಂದ ಬೈಕ್ ನಮ್ಮ ತಂದೆಯ ಬೈಕ್ ಗೆ ಡಿಕ್ಕಿಪಡಿಸಿ ಅಪಘಾತಪಡಿಸಿತು ಎಂದರೆ ಸರಿ. ಅದರಿಂದ ನನ್ನ ತಂದೆ ಬೈಕಿ ಸಮೇತ

ಕೆಳಗೆ ಬಿದ್ದಾಗ ಅವರಿಗೆ ಗಾಯಗಳಾದವು ಎಂದರೆ ಸರಿ. ದಿಃ01-03-2024ರಂದು ನಿಪಿ-1 ರಂತೆ ದೂರು ದಾಖಲಿಸಿದ್ದೆನೆ ಎಂದರೆ ಸರಿ. ನನ್ನದೂರಿನಲ್ಲಿ ನನ್ನ ತಂದೆಗೆ ಅಪಘಾತಪಡಿಸಿದ ಕೆಎ/16-ಇಇ-6996 ಬೈಕ್ ಮತ್ತು ಲಾರಿಯ ಚಾಲಕನ ವಿರುದ್ದ ಕ್ರಮ ಕೈಗೊಳ್ಳುವಂತೆ ದೂರು ನೀಡಿರುತ್ತೇನೆ ಎಂದರೆ ಸರಿ.

ದಿಃ 02-03-2024ರಂದು ಪೊಲೀಸರು ಸ್ಥಳ ಮಹಜರು ಜರುಗಿಸಲು ಬಂದರು ಎಂದರೆ ಸರಿ. ಸದರಿ ಸಮಯಕ್ಕೆ ಹಾಜರಿದ್ದ ಚಾಸಾ-6 ಮತ್ತು 7 ರವರ ಸಹಿಗಳನ್ನು ನಿಪಿ-2 ಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ನಿಪಿ-2ರ ಸಮಯಕ್ಕೆ ನಿಪಿ-4 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿ ಅದಕ್ಕೆ ನಮ್ಮ ಸಹಿ ಪಡೆದರು ಎಂದರೆ ಸರಿ.

ದಿಃ22-03-2024ರಂದು ಕುಮಾರ ಎಂಬಾತ ಎದುರುಗಡೆಯಿಂದ ಬೈಕ್ ಚಲಾಯಿಸಿಕೊಂಡು ಬಂದಾಗ ಲಾರಿಬಂದು ಅಪಘಾತಪಡಿಸಿದ ಕುರಿತು ಚಾಸಾ-13 ಮತ್ತು 14 ರವರು ಸ್ಥಳದಲ್ಲಿದ್ದು ಚಾಸಾ-12 ರವರಿಗೆ ತಿಳಿಸಿದರು ಎಂದರೆ ಸರಿ. ಸದರಿಯವರು ಸದರಿ ಲಾರಿ ಸಂಖ್ಯೆಯನ್ನು ಕೆಎ-19/ಎಡಿ-6004 ಬಿಳಿ ಬಣ್ಣದ ಗೂಡ್ಸ್ ಲಾರಿ ಎಂದುತಿಳಿಸಿದರು ಎಂದರೆ ಸರಿ. ಸದರಿ ದಿನದಂದು 1ನೇ ಅರೋಪಿಯಾದ ಜಯರಾಮ ಎಂಬಾತ ಸದರಿ ಲಾರಿಯನ್ನು ಚಲಾಯಿಸುತ್ತಿದ್ದು ಆತನನ್ನು ನನಗೆ ಪೊಲೀಸ್ ಠಾಣೆಯಲ್ಲಿ ತೋರಿಸಿದರು ಎಂದರೆ ಸರಿಯಲ್ಲ.ಸಾಕ್ಷಿಯ ಅಲ್ಲಗಳೆದ ಹೇಳಿಕೆಯನ್ನು ನಿಪಿ- 5 ಎಂದು ಗುರುತಿಸಲಾಯಿತು. ನನ್ನ ತಂದೆಗೆ ಅಪಘಾತಪಡಿಸಿದ ಲಾರಿ ಮತ್ತು ಬೈಕ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಕಡತದಲ್ಲಿನ ದಿಃ 02-03-2024ರಂದು ವಾಹನ ತಡೆ ಪಂಚನಾಮೆ ಸಮಯದಲ್ಲಿ ತೆಗೆದ ಪೊಟೋದಲ್ಲಿನ ಬೈಕ್ ನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೊಟೋವನ್ನು ನಿಪಿ-6 ಎಂದು ಗುರುತಿಸಲಾಯಿತು. ದಿಃ 22-03-2024ರಂದು ವಾಹನ ತಡೆ ಪಂಚನಾಮೆ ಸಮಯದಲ್ಲಿ ತೆಗೆದ ಪೊಟೋದಲ್ಲಿನ ಲಾರಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೊಟೋವನ್ನು ನಿಪಿ-7 ಎಂದು ಗುರುತಿಸಲಾಯಿತು. ಈ ದಿನನ್ಯಾಯಾಲಯದ ಮುಂದೆ ಇರುವ 1ನೇ ಅರೋಪಿಯೇ ತನ್ನ ಲಾರಿಯನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದ ಕಾರಣ ನನ್ನ ತಂದೆ ಅಪಘಾಪಡಿಸಿದ್ದು ಅದರಿಂದ ನನ್ನ ತಂದೆ ಮೃತಪಟ್ಟಿದ್ದು, ಸದರಿ ಆರೋಪಿಯನ್ನು ನನಗೆ ಠಾಣೆಯಲ್ಲಿ ತೋರಿಸಿದ್ದರು ಸಹ ನಾನು ಅರೊಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ಶ್ರೀ ಆರ್ ಅರ್ ವಕೀಲರಿಂದ –**

ನಿಪಿ-1ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲದೆ ಇದ್ದರು ಸಹ ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಚನ್ನಗಿರಿ-ದಾವಣಗೆರೆ ರಸ್ತೆ ಹೆದ್ದಾರಿ ರಸ್ತೆ ಎಂದರೆ ಸರಿ. ಸದರಿ ಹೆದ್ದಾರಿಯಲ್ಲಿ ವಾಹನಗಳ ಸಂಚಾರ ಹೆಚ್ಚಾಗಿರುತ್ತದೆ ಎಂದರೆ ಸರಿ. ಸದರಿ ದಿನದಂದು ಮುಖಾ ಮುಖಿ ಡಿಕ್ಕಿಯಾದ ಬೈಕ್ ಗಳ ಪೈಕಿ ನನ್ನ ಬೈಕ್ ಹಿರೋ ಸ್ಪ್ಲೆಂಡರ್ ಆಗಿರುತ್ತದೆ. ಸದರಿ ನನ್ನ ಬೈಕ್ 15 ವರ್ಷದ ಹಳೆಯದಾಗಿರುತ್ತದೆ. ಸದರಿ ಬೈಕ್ ನ ನಂಬರ್ ಪ್ಲೇಟ್ ಕಾಣಿಸುತ್ತಿರಲಿಲ್ಲ ಎಂದರೆ ಸರಿ. ಸದರಿ ಬೈಕ್ ನ ಆರ್ ಸಿ ಮತ್ತು ಇನ್ಸೂರೆನ್ಸ್ ನ್ನು ಪೊಲೀಸರಿಗೆ ಹಾಜರುಪಡಿಸಿರುತ್ತೇನೆ. ನಮ್ಮ ಬೈಕ್ ಗೆ ಸದರಿ ಸಮಯಕ್ಕೆ ವಿಮೆ ಚಾಲ್ತಿಯಲ್ಲಿರಲಿಲ್ಲ ಎಂದರೆ ಸರಿ. ನನ್ನ ತಂದೆಯ ಬೈಕಿಗೆ ಎದರುಗಡೆಯಿಂದ ಬಂದು ಅಪಘಾತಪಡಿಸಿದ ಬೈಕಿಗೂ ಸಹ ವಿಮೆ ಚಾಲ್ತಿಯಲ್ಲಿರಲಿಲ್ಲ ಎಂದರೆ ಸರಿ. ನಾನು ಅಪಘಾತ ವಿಮಾ ಪರಿಹಾರದ ಹಣವನ್ನು ಪಡೆಯಲು ಈ ಲಾರಿಯ ಮೇಲೆ ಈ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಸದರಿ ಪ್ರಶ್ನೆಯನ್ನು2 ಬಾರಿ ಕೇಳಿದರೂ ಸಹ 2 ಬಾರಿ ಸದರಿ ಉತ್ತರವನ್ನೇ ನೀಡಿರುತ್ತಾರೆ. 1ನೇ ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೆನೆ ಎಂದರೆ ಸರಿ.

ನಿಪಿ2 ನ್ನು ಜರುಗಿಸಲು ನಮಗೆ ಯಾವುದೇ ಪೂರ್ವ ನೋಟಿಸನ್ನು ಕೊಟ್ಟಿರಲಿಲ್ಲ ಎಂದರೆ ಸರಿ. ನಿಪಿ-2ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದರೆಸ ರಿ. ನಿಪಿ-2 ಕ್ಕೆ ಬಿಳಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ತದನಂತರ ನಾನು ಎಂದಿಗೂ ಸಹ ಪೊಲೀಸ್ ಠಾಣೆಗೆ ಹಾಜರಾಗಿಲ್ಲ ಎಂದರೆ ಸಾಕ್ಷಿ 15-20 ದಿನಳ ತರುವಾಯ ಪೊಲೀಸರುಕರೆ ಮಾಡಿ ಕರೆಸಿದ್ದರ ಎಂದರೆ ಸರಿ. ನಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ. ನಾನು ಅಪಘಾತದಲ್ಲಿ ಮೃತಪಟ್ಟ ನನ್ನ ತಂದೆಯ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ತಂದೆ ಚಲಾಯಿಸುತ್ತಿದ್ದ ಬೈಕ್ ಗೆ ಸದರಿ ಲಾರಿ ಚಾಲಕ ಯಾವುದೇ ಅಪಘಾತಪಡಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**